# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 485 |
| **ಸದಸ್ಯರ ಹೆಸರು** | : | ಶ್ರೀ ಕೆ. ವಿವೇಕಾನಂದ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 20-08-2026 |
| **ಉತ್ತರಿಸಬೇಕಾದ ಸಚಿವರು** | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬೆಂಗಳೂರು ನಗರಕ್ಕೆ ಕೃಷ್ಣರಾಜ ಜಲಾಶಯದಿಂದ ಎಷ್ಟು ಹಂತದಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತಿದೆ; ಮತ್ತು ದಿನನಿತ್ಯ ಎಷ್ಟು ಲೀಟರ್ ನೀರನ್ನು ಬೆಂಗಳೂರು ನಗರಕ್ಕೆ ಉಪಯೋಗಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬೆಂಗಳೂರು ನಗರಕ್ಕೆ ಕಾವೇರಿ ನದಿಪಾತ್ರಗಳ ಅಣೆಕಟ್ಟುಗಳಾದ ಕೃಷ್ಣರಾಜ ಸಾಗರ ಜಲಾಶಯ ಮತ್ತು ಕಬಿನಿ ಜಲಾಶಯಗಳಿಂದ ಸರಬರಾಜು ಮಾಡಲಾಗುತ್ತಿರುವ ನೀರಿನ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ. | ಕಾವೇರಿ ನೀರು ಸರಬರಾಜು ಯೋಜನೆಯ ಹಂತಗಳು | ದಿನ ನಿತ್ಯ ನೀರು ಸರಬರಾಜು (ದಶಲಕ್ಷ ಲೀಟರ್ ಗಳಲ್ಲಿ) |
|---|---|---|
| 1 | ಕಾವೇರಿ 1ನೇ ಹಂತ | 135 |
| 2 | ಕಾವೇರಿ 2ನೇ ಹಂತ | 135 |
| 3 | ಕಾವೇರಿ 3ನೇ ಹಂತ | 330 |
| 4 | ಕಾವೇರಿ 4ನೇ ಹಂತ 1ನೇ ಘಟ್ಟ | 300 |
| 5 | ಕಾವೇರಿ 4ನೇ ಹಂತ 2ನೇ ಘಟ್ಟ | 550 |
| 6 | ಕಾವೇರಿ 5ನೇ ಹಂತ | 775 |
| | **ಒಟ್ಟು** | **2225** |

ಒಟ್ಟಾರೆಯಾಗಿ 2225 ದಶಲಕ್ಷ ಲೀಟರ್ ನ ಪೈಕಿ, ಪ್ರಸ್ತುತ ಪ್ರತಿನಿತ್ಯ ಬೆಂಗಳೂರು ನಗರಕ್ಕೆ ಸುಮಾರು 1935 ದಶಲಕ್ಷ ಲೀಟರ್ ಶುದ್ಧ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕಾವೇರಿ 5ನೇ ಹಂತದಲ್ಲಿ 775 ದಶಲಕ್ಷ ಲೀಟರ್ ನ ಪೈಕಿ, ಪ್ರಸ್ತುತ ಪ್ರತಿನಿತ್ಯ 485 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಉಳಿದ 290 ದಶಲಕ್ಷ ಲೀಟರ್ ನೀರನ್ನು 110 ಹಳ್ಳಿಗಳಲ್ಲಿನ ಬೇಡಿಕೆ ಅನುಗುಣವಾಗಿ ಹಂತ ಹಂತವಾಗಿ ನೀರು ಸರಬರಾಜು ಮಾಡಲಾಗುವುದು.

...2/

| | | |
|---|---|---|
| ಆ) | ಬೆಂಗಳೂರು ಮಹಾನಗರವು ದಿನೇ ದಿನೇ ವೇಗವಾಗಿ ಬೆಳೆಯುತ್ತಿರುವುದರಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಕೆ.ಆರ್.ಎಸ್. ಜಲಾಶಯಕ್ಕೆ ಸೀಮಿತವಾಗದೆ ಬೇರೆ ಜಲಾಶಯದಿಂದ ನೀರನ್ನು ಸರಬರಾಜು ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ಮುಂದಿನ ವರ್ಷಗಳ ನೀರು ಅಗತ್ಯತೆ ಪೂರೈಸಲು ಹೊಸ ಜಲಮೂಲಗಳನ್ನು ಗುರುತಿಸಲು. ಶ್ರೀ ಬಿ.ಎನ್. ತ್ಯಾಗರಾಜ. ಮಾಜಿ ಅಧ್ಯಕ್ಷರು. ಬೆಂಗಳೂರು ಜಲಮಂಡಳಿ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ನೀಡಿರುವ ವರದಿಯನ್ವಯ. ಎತ್ತಿನಹೊಳೆ ಯೋಜನೆಯಲ್ಲಿ ಬೆಂಗಳೂರು ನಗರಕ್ಕೆ 2.50 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿರುತ್ತದೆ. |

**ಸಂಖ್ಯೆ:** ನಅಇ 400 ಎಂಎನ್ಐ 2026(ಇ)

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು